ಇ) ಕೆ.ಆರ್.ಪೇಟೆ ತಾಲ್ಲೂಕು, ಗಂಜಿಗೆರೆಯಲ್ಲಿ ಸರ್ಕಾರಿ ಪ್ರೌಢಶಾಲೆ ಇದ್ದು, 60 ವಿದ್ಯಾರ್ಥಿಗಳು 10ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುತ್ತಾರೆ. ಗಂಜಿಗೆರೆಯಿಂದ ಸುಮಾರು 5 ಕಿ.ಮೀ. ಅಂತರದಲ್ಲಿ ಸೋಮನಹಳ್ಳಿಯಲ್ಲಿ ಸರ್ಕಾರಿ ಪದವಿ ಪೂರ್ವ ಕಾಲೇಜು ಇರುತ್ತದೆ. ಮತ್ತು 6 ಕಿ.ಮೀ. ಅಂತರದಲ್ಲಿ ಬಾಳೇನಹಳ್ಳಿ ಮತ್ತು ಇಷ್ಟೇ ಅಂತರದಲ್ಲಿ ಅಂದರೆ 6 ಕಿ.ಮೀ. ದೂರದ ಬೂಕನಕೆರೆ ಗ್ರಾಮಗಳಲ್ಲಿ ಸರ್ಕಾರಿ ಪದವಿ ಪೂರ್ವ ಕಾಲೇಜುಗಳು ಇರುತ್ತವೆ.

ರಾಜ್ಯದಲ್ಲಿ ಪಶುಸಂಗೋಪನಾ ಇಲಾಖೆಯ ಜಾನುವಾರುಗಳಿಗೆ ಕಡ್ಡಾಯ ವಿಮೆ ಮಾಡಿಸುವ ಬಗ್ಗೆ

278 (281) ಶ್ರೀ. ದಿನಕರ ಕೇಶವ ಶೆಟ್ಟಿ (ಕುಮಟ) : ಮಾನ್ಯ ಪಶುಸಂಗೋಪನಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಪಶುಸಂಗೋಪನಾ ಇಲಾಖೆ ವತಿಯಂದ ಎಲ್ಲಾ ಜಾನುವಾರುಗಳಿಗೂ ಕಡ್ಡಾಯ ವಿಮೆ ಮಾಡಿಸದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಎಲ್ಲಾ ಜಾನುವಾರುಗಳಿಗೂ ಕಡ್ಡಾಯ ವಿಮೆ ಮಾಡಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಇ) ಎಲ್ಲಾ ಜಾನುವಾರುಗಳಿಗೂ ಸರ್ಕಾರವೆ ನೇರವಾಗಿ ಕಡ್ಡಾಯ ವಿಮೆ ಮಾಡಿಸಲು ಸರ್ಕಾರಕ್ಕಿರುವ ತೊಂದರೆಗಳೇನು?

ಈ) ಎಲ್ಲಾ ಜಾನುವಾರುಗಳಿಗೂ ಸರ್ಕಾರವೇ ವಿಮೆ ಮಾಡಿಸುವು ದರಿಂದ ರೈತರಿಗೆ ಮತ್ತು ಬಡ ಕೂಲಿ ಕಾರ್ಮಿಕರಿಗೆ ಅನುಕೂಲ ವಾಗುವುದಿಲ್ಲವೇ?

ಶ್ರೀ ರೇವೂನಾಯಕ್ ಬೆಳಮಗಿ (ಪಶುಸಂಗೋಪನಾ ಸಚಿವರು) :

ಅ) ಬಂದಿದೆ.

ಆ) ಭಾರತ ಸರ್ಕಾರದ 11ನೇ ಪಂಚವಾರ್ಷಿಕ ಯೋಜನೆಯಡಿ ರಾಜ್ಯದ ಆಯ್ದ 14 ಜಿಲ್ಲೆಗಳಲ್ಲಿ ಜಾನುವಾರು ವಿಮೆ ಕಾರ್ಯಕ್ರಮವನ್ನು ಕರ್ನಾಟಕ ಜಾನುವಾರು ಅಭಿವೃದ್ಧಿ ಸಂಸ್ಥೆವತಿಯಿಂದ ಅನುಷ್ಠಾನ ಗೊಳಿಸಲಾಗುತ್ತಿದೆ. ಈ ಕಾರ್ಯಕ್ರಮದಡಿ ಶೇ. 50 ರಷ್ಟು ವಿಮೆ ಹಣವನ್ನು

ಸಬ್ಸಿಡಿ ರೂಪದಲ್ಲಿ ಭಾರತ ಸರ್ಕಾರವು ಭರಿಸುತ್ತಿದ್ದು ಉಳಿದ ಶೇ.50 ರಷ್ಟನ್ನು ರೈತರು ಭರಿಸಬೇಕಿದೆ. ಇಲ್ಲಿಯವರೆಗೆ 32,517/– ಹಸು ಮತ್ತು ಎಮ್ಮೆಗಳನ್ನು ವಿಮೆಗೆ ಒಳಪಡಿಸಲಾಗಿದೆ.

ಇ) ಕೇಂದ್ರ ಸರ್ಕಾರ ಹೆಚ್ಚಿನ ಸಬ್ಸಿಡಿ ನೀಡಿದಲ್ಲಿ ಪರಿಶೀಲಿಸಲಾಗುವುದು.

ಈ) ಹೌದು.

ತಾಲ್ಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳ ಬಗ್ಗೆ

281 (683) ಡಾ: ಬಗಲಿ ಸಾರ್ವಭೌಮ ಸಾತಗೌಡ (ಇಂಡಿ) : ಮಾನ್ಯ ಪಶುಸಂಗೋಪನಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪಶುಸಂಗೋಪನೆ ಇಲಾಖೆಯಿಂದ ತಾಲ್ಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿ ಎಂದು ನಿಯೋಜನೆ ಮೇಲೆ ಕಾರ್ಯನಿರ್ವಹಿಸುತ್ತಿರುವ ಪಶುವೈದ್ಯಕೀಯ ವೈದ್ಯಾಧಿಕಾರಿಗಳ ಹೆಸರೇನು?

ಆ) ಅವರು ಈ ಹುದ್ದೆಗಳಲ್ಲಿ ಯಾವ ದಿನಾಂಕದಿಂದ ಕಾರ್ಯನಿರ್ವಹಿಸುತ್ತಿದ್ದಾರೆ?

ಇ) ಬಹುತೇಕ ಪಶುವೈದ್ಯಕೀಯ ಆಸ್ಪತ್ರೆಗಳಲ್ಲಿ ಪಶು ವೈದ್ಯಕೀಯ ವೈದ್ಯಾಧಿಕಾರಿಗಳ ಹುದ್ದೆ ಖಾಲಿ ಇರುವಾಗ ವೈದ್ಯಾಧಿಕಾರಿಗಳಿಗೆ ಆಡಳಿತಾತ್ಮಕ ಹುದ್ದೆ ನೀಡುವುದು ಸಮಂಜಸವೇ?

ಈ) ಪಂಚಾಯತ್ ರಾಜ್ ಇಲಾಖೆಗೆ ಈ ವೈದ್ಯರ ಸೇವೆ ಅಷ್ಟೊಂದು ಅನಿವಾರ್ಯವೆ?

ಉ) ಈ ವೈದ್ಯಾಧಿಕಾರಿಗಳನ್ನು ತಾಲ್ಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿ ಹುದ್ದೆಯಿಂದ ಬಿಡುಗಡೆಗೊಳಿಸಿ ಮಾತೃ ಇಲಾಖೆಗೆ ಕಳಿಸಿಕೊಟ್ಟು ಜಾನುವಾರುಗಳ ಪ್ರಾಣ ರಕ್ಷಣೆಯ ಪುಣ್ಯ ಕಾರ್ಯಕ್ಕೆ ತೊಡಗಿಸಲಾಗುವುದೇ?

ಊ) ಹಾಗಿದ್ದರೆ, ಈ ಅಧಿಕಾರಿಗಳನ್ನು ಎಷ್ಟು ದಿನಗಳಲ್ಲಿ ಬಿಡುಗಡೆ ಮಾಡಲಾಗುವುದು?